ಕಾಲೇಜು ಶಿಕ್ಷಣ ಇಲಾಖೆ

# ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

ಕಲ್ಪನಾ ಚಾವ್ಲ ಮಹಿಳಾ ಘಟಕ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ (IQAC)

ಸಹಯೋಗದೊಂದಿಗೆ

## ವಿಶೇಷ ಅತಿಥಿ ಉಪನ್ಯಾಸ

## ಭವಿಷ್ಯದ ಮಹಿಳೆ: ಸಮಸ್ಯೆಗಳು ಮತ್ತು ಸವಾಲುಗಳು

**FUTURE WOMEN : PROBLEMS & CHALLENGES**

ದಿನಾಂಕ: 10-12-2020 ಸಮಯ : ಬೆಳಗ್ಗೆ 11.00 ಕ್ಕೆ ಸ್ಥಳ: ಕೊಠಡಿ-3

ಅಧ್ಯಕ್ಷತೆ : ಶ್ರೀ ಮಲ್ಲನಗೌಡ ಆರ್
ಪ್ರಾಚಾರ್ಯರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

ಸಂಪನ್ಮೂಲ ವ್ಯಕ್ತಿಗಳು : ಡಾ. ಶೀಲಾಕುಮಾರಿದಾಸ್
ಮುಖ್ಯಸ್ಥರು, ಕನ್ನಡ ವಿಭಾಗ
ಎಲ್.ವಿ.ಡಿ. ಮಹಾವಿದ್ಯಾಲಯ, ರಾಯಚೂರು

ಗೌರವ ಉಪಸ್ಥಿತರು : ಶ್ರೀ ಮಹಾಂತೇಶ ಅಂಗಡಿ
ಸಂಯೋಕಜರು, ಐ.ಕ್ಯೂ.ಎ.ಸಿ.
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

: ಶ್ರೀಮತಿ ಇಶ್ರತ್ ಬೇಗಂ
ಸಹ ಸಂಯೋಕಜರು, ಐ.ಕ್ಯೂ.ಎ.ಸಿ.
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

: ಶ್ರೀಮತಿ ಪುಷ್ಪ
ಮುಖ್ಯಸ್ಥರು ರಸಾಯನಶಾಸ್ತ್ರ ವಿಭಾಗ ಹಾಗೂ
ಸಂಯೋಜಕರು ಕಲ್ಪನಾ ಚಾವ್ಲ ಮಹಿಳಾ ಕೋಶ
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

**ತಮಗೆಲ್ಲರಿಗೂ ಆದರದ ಸ್ವಾಗತ**

ಎಲ್ಲಾ ಮಹಿಳಾ ಸದಸ್ಯರು

ಸಂಯೋಜಕರು
ಕಲ್ಪನಾ ಚಾವ್ಲ ಮಹಿಳಾ ಕೋಶ

* * * * *

ತೊಟ್ಟಿಲು ತೂಗುವ ಕೈ ಜಗತ್ತನ್ನೇ ಆಳಬಲ್ಲದು

PRINCIPAL
Govt First Grade College
RAICHUR

**Government of Karnataka**

**DEPARTMENT OF COLLEGIATE EDUCATION**

**GOVERNMENT FIRST GRADE COLLEGE, RAICHUR**

# KalpanaChawla Women Cell and IQAC

## Guest Lecture on

# Future Women:Problems and Challenges

**10-12 2020**

Kalpana Chawla Women Cell, in association with Internal Quality Assurance Cell of the College, organized a guest lecture on the topic "Future Women : Problems and and Challenges, on 10th December, 2020.Dr SheelakumariDas,Head,Dept. of Kannada L.V.D.College,Raichur was the Guest speaker. Speaking on this occasion DrSheeladas said that Indian women are facing so many problems since from olden days in this male dominated society, and still it is continued even in this modern days also. In earlier days role of women was confined to kitchen only. But the role of present day women has expanded to different fields and areas. In spite of family responsibilities the working women has to face so many challenges. Therefore she gave call to the students to get educated and be empoweredthemselves to take right decision at the right time.

She also told that, every woman acquire Knowledge, Ability and Interest to face all these problems and get solutions.IQACCo-ordinatorSri.MahanteshAngadiand co-coordinator Smt.Ishrat begum spoke on this occasion. Smt.Pushpaco-ordinator,Kalpana Chawla Women Cell gave introductory speech.SriMallanaGouda, Principal, of the college presided over the function.

The programme began with invocation by the studentskum. Sushma,and Annapurna. Megha of BSc Vthsem.welcomed the guests and audience. Head of the Department of Political science Smt.SujathaMakal introduced the guest.Programme concluded with the vote of thanks by kumariShambhavi of BSc.Vthsemesterstudent.All lecturers an students attended the programme.At the end, students had fruitfull interaction with the guest.












Dr.Sheeakumari Das, addressing the students on the topic future women








ಡಪದ ಮಠ ತುರುವೇ ಕೆರೆ, ಇವರುಗಲು ದಾಯದಂತೆ ಗೌರವಿಸಿದರು.

# ಇಚ್ಛೆ, ಜ್ಞಾನ, ಶಕ್ತಿ ಇವು ಮಹಿಳಾ ಸಬಲೀಕರಣದ ಸಾಧನ ತ್ರಯಗಳು : ಡಾ|| ಶೀಲಾದಾಸ್




ರಾಯಚೂರು.ಡಿ.11–

ಇಚ್ಛೆ, ಜ್ಞಾನ, ಕ್ರಿಯೆ ಇವು ಮೂರರ ಪ್ರತಿ ರೂಪವೇ ಶ್ರೀಮಾತೆ ಪಾರ್ವತಿ. ಈ ಮೂರು ಪರ್ವಗಳ ಭವಿಷ್ಯದ ಮಹಿಳೆಯ ಶಕ್ತಿತ್ರಯಗಳಾಗಬೇಕು ಮತ್ತು ಸಬಲೀಕರಣದ ಸಾಧನೆಗಳಾಗಬೇಕು ಎಂದು ಎಲ್‌ವಿಡಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ|| ಶೀಲಾಕುಮಾರಿದಾಸ್ ಅವರು ಅಭಿಪ್ರಾಯ ಪಟ್ಟರು.

ಅವರು ಇತ್ತೀಚೆಗೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ, ಆಂತರಿಕ ಗುಣಮಟ್ಟ ಭರವಸೆ ಕೋಶದ ಸಹಯೋಗದೊಂದಿಗೆ ಕಲ್ಪನಾ ಚಾವ್ಲಾ ಮಹಿಳಾ ಕೋಶ ಆಯೋಜಿಸಿದ್ದ ಭವಿಷ್ಯದ ಮಹಿಳೆ: ಸಮಸ್ಯೆಗಳು ಮತ್ತು ಸವಾಲುಗಳು ಎನ್ನುವ ವಿಷಯದ ಮೇಲಿನ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡು ಮೇಲಿನಂತೆ ಅಭಿಪ್ರಾಯಪಟ್ಟರು.

ಪ್ರಾಚೀನ ಕಾಲದಿಂದಲೂ ಮಹಿ... ಸಾಕಷ್ಟು ಸಮಸ್ಯೆಗಳನ್ನು ಎದುರಿ...ತ್ತಾ ಬಂದಿದ್ದು, ಇಂದಿನ ಆಧುನಿಕ ಯುಗದಲ್ಲಿಯೂ ಆಕೆಯ ಸಮಸ್ಯೆಗಳ ಸರಮಾಲೆಗೆ ಕೊನೆಯೇ ಇಲ್ಲದಂತಾಗಿದೆ. ಅಡುಗೆ ಮನೆಗೆ ಸೀಮಿತವಾಗಿದ್ದ ಪ್ರಾಚೀನ ಮಹಿಳೆಯ ಪಾತ್ರ, ಇಂದಿನ ಆಧುನಿಕ ಯುಗದಲ್ಲಿ ಹಲವು ಕ್ಷೇತ್ರಗಳಿಗೆ ವಿಸ್ತರಿಸಿ ಆಕೆ ಸಾಕಷ್ಟು ಸಾಧನೆ ಮಾಡಿದ್ದರೂ ಸಮಾಜ ಅವಳನ್ನು ಇನ್ನೂ ದ್ವಿತೀಯ ದರ್ಜೆ ನಾಗರಿಕಳನ್ನಾಗಿಯೇ ಕಾಣುತ್ತಿದೆ. ಮಹಿಳೆ ಹುಟ್ಟಿನಿಂದ ಸಾಯುವವರೆಗೂ ಅನೇಕ ತೊಂದರೆಗಳಿಗೆ, ಶೋಷನೆಗಳಿಗೆ ಒಳಗಾಗುತ್ತಿದ್ದರೂ ಅದುವೇ ಜೀವನ ಎಂದು ಒಪ್ಪಿಕೊಂಡು ನೋವುಗಳನ್ನೆಲ್ಲ ವನ್ನು ಮೌನವಾಗಿ ಅನುಭವಿಸುತ್ತಿದ್ದಾಳೆ. ಆದರೆ ಯಾವುದೇ ಸಂಕಷ್ಟದ ಸಂದರ್ಭ ಬಂದರೂ ಎದೆಗುಂದದೆ ಧೈರ್ಯದಿಂದ ಅದನ್ನೂ ಮೆಟ್ಟಿ ನಿಂತು ಎದುರಿಸಿ ಸಾಧಿಸುವ ಛಲ ಮೈಗೂಡಿಸಿ ಕೊಳ್ಳಬೇಕೆಂದು, ತಮ್ಮ ವೃತ್ತಿ ಜೀವನದ ಅನುಭವಗಳ ಮೂಲಕ ವಿದ್ಯಾರ್ಥಿಗಳ ಮನ ಮುಟ್ಟುವಂತೆ ತಿಳಿಸಿದರು.

ಐಕ್ಯೂಎಸಿ ಸಂಯೋಜಕರಾದ ಮಹಾಂತೇಶ ಅಂಗಡಿಯವರು, ಸಹ- ಸಂಯೋಜಕರಾದ ಉಪನ್ಯಾಸಕಿ ಇಶ್ರತ್ ಬೇಗಂ ಮಾತನಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಕಲ್ಪನಾ ಚಾವ್ಲಾ ಮಹಿಳಾ ಘಟಕದ ಸಂಯೋಜಕರೂ ಆದ ಶ್ರೀಮತಿ ಪುಷ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ಕಾಲೇಜಿನ ಪ್ರಾಚಾರ್ಯರಾದ ಮಲ್ಲನಗೌಡ ವಹಿಸಿದ್ದರು.

ವಿದ್ಯಾರ್ಥಿನಿಯರಾದ ಕುಮಾರಿ ಸುಷ್ಮಾ ಮತ್ತು ಅನ್ನ ಪೂರ್ಣ, ಕುಮಾರಿ ಭಾಗ್ಯ ಪ್ರಾರ್ಥನೆ ಗೀತೆ ಹಾಡಿದರು. ಕುಮಾರಿ ಮೇಘಾ ಎಲ್ಲರನ್ನು ಸ್ವಾಗತಿಸಿದರು. ರಾಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಸುಜಾತ ಮಾಕಲ್ ಅತಿಥಿಗಳನ್ನು ಪರಿಚಯಿಸಿದರು.

ವಿದ್ಯಾರ್ಥಿನಿ ಕುಮಾರಿ ಶಾಂಭವಿಯವರ ವಂದಿಸಿದರು. ಕಾರ್ಯಕ್ರಮ ದಲ್ಲಿ ಉಪನ್ಯಾಸಕರುಗಳಾದ ವಿಜಯಶ್ರೀ ಪಾಟೀಲ್, ಅರ್ಷಿ ಜಮಾಲ್, ಸಪ್ನ ಕಲ್ಯಾಣಕರ್, ಪದ್ಮಾವತಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

**ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು**

**ಕಲ್ಪನಾ ಚಾವ್ಲ ಮಹಿಳಾ ಘಟಕ ಹಾಗೂ ಆಂತರಿಕ ಗುಣಮಟ್ಟಕೋಶ**

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**ದಿನಾಂಕ: 08-03-2021** **ಸಮಯ: ಬೆಳಗ್ಗೆ 10 ಗಂ.**

ಉದ್ಘಾಟಕರು : **ಶ್ರೀಮತಿ.ಸಂತೋಷರಾಣಿ** ಕೆ.ಎ.ಎಸ್
ಪುರಸಭೆ ತಹಸೀಲ್ದಾರರು,
ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು.

ಮುಖ್ಯ ಅತಿಥಿಗಳು : **ಶ್ರೀಮತಿ. ಸುಜಾತ ಡಿ.ನಾಯಕ**
ಪಿ.ಎಸ್.ಐ.ಸಿರವಾರ.

ಅಧ್ಯಕ್ಷತೆ : **ಶ್ರೀ ಮಲ್ಲನಗೌಡ.ಆರ್**
ಪ್ರಾಚಾರ್ಯರು,
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು

ಗೌರವ ಉಪಸ್ಥಿತಿ : **ಶ್ರೀ ಮಹಾಂತೇಶ ಅಂಗಡಿ**
ಸಂಯೋಜಕರು, ಐ.ಕ್ಯೂ.ಎ.ಸಿ

**ಶ್ರೀಮತಿ ಇಶ್ರತ್ ಬೇಗಂ**
ಸಹ ಸಂಯೋಜಕರು, ಐ.ಕ್ಯೂ.ಎ.ಸಿ.

**ಶ್ರೀಮತಿ ಪುಷ್ಪ**
ಮುಖ್ಯಸ್ಥರು, ರಸಾಯನಶಾಸ್ತ್ರ ವಿಭಾಗ ಹಾಗೂ
ಸಂಯೋಜಕರು, ಕಲ್ಪನಾಚಾವ್ಲ ಮಹಿಳಾ ಕೋಶ.

**ಸರ್ವರಿಗೂ ಆದರದ ಸ್ವಾಗತ**

ಸರ್ವಸದಸ್ಯರು
ಕಲ್ಪನಾ ಚಾವ್ಲ ಮಹಿಳಾ ಕೋಶ

ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು

***Choose To Challenge***

**Government of Karnataka**

**DEPARTMENT OF COLLEGIATE EDUCATION**

**GOVERNMENT FIRST GRADE COLLEGE, RAICHUR**

## KalpanaChawla Women Cell and

## IQAC

# International Women’s Day

**08-03- 2021**

Kalpana Chawla Women Cell, in association with Internal Quality Assurance Cell of the College, celebrated International Women’s Day on 8thMarch 2021in theCollege.Smt.Snthoshrani,Tahasildar,MunicipalCell,Raichurwas the Chief Guest. after inaugurating the programme by the lighting the lamp TahasildarSmt.Santoshrani said that, though women have proved their ability in various fields still exploitation against her has not stopped yet She has to struggle hard more than men and face so many challenges to come forward.Discriminatory attitude of the society towards women is strong reason for limited participation of women in various economic activities. She also gave call to the students to get educated themselves which empowers them to face the challenges and achieve something in their life.

In his presidential remarks Sri Mallanagouda, said that ,the women workers in garment factory in America raised, their voice against their exploitation and long working hours without any leisure. Later it turned in to a great movement in different parts of the world specially in Denmark,Austriaand Switzerladetc.;In memory of this great historic moment,since 1975, March 8$^{th}$ every year is being celebrated as “International Women’s Day” .He also expressed his Happiness and appreciated the Kalpana Chawla Women Cell of the College, for organizing many activities for the benefit of the girl students.

On this occasion, ASHA worker, and parents of poor students of the college were felicitated with financial assistance, financed by IDBI Bank Raichur.The programme started with invocation song by KumariPalllavi of BScI semester. Smt.pushpa, co-ordinator of Kalpana Chawla Women’s Cell gave introduction about the programme, and appreciated the parents of poor students who strive hard to get their children educated. Smt.SujathaMakal,Asst.prof.welcomed the guests and audience. Sri.mahadevappaAsst.Prof.ofkannadaDept.introduced the guest.IQAc Co-OrdiinatorDr.MahanteshAngadi,Co-CordinatorSmt.IshratBegum,were on the dias.alll the lecturers and students participated in the programme.finallyprogramme came to an end with vote of thanks by Smt.Sapna,Asst.Prof.ofcommerecedepartment

**Inauguration of International Women' Day by Smt.SantoshRani ,MunicipalTahasildar**











**TAHASILDAR SMT.SANTOSHRANI ADDRESSING THE STUDENTS**




















**FELICITATION TO ASHA WORKER AND PARENTS OF POOR STUDENTS WITH FINANCIAL ASSISTANCE BY IDBI**

# ప్రతిభావంతులకు సన్మానం



మహిళలను సన్మానిస్తున్న దృశ్యం

**రాయచూరు రూరల్:** సదృఢ సమాజ నిర్మాణానికి స్త్రీ పురుషులు సమానమని దేవదుర్గ పురసభ అధికారి సంతోష్‌రాణి పేర్కొన్నారు. మంగళవారం ప్రభుత్వ డిగ్రీ కళాశాలలో ఏర్పాటు చేసిన అంతర్జాతీయ మహిళా దినోత్సవంలో వివిధ రంగాల్లో ప్రతిభావంతులైన మహిళలను సన్మానించి మాట్లాడారు. కార్యక్రమంలో ప్రిన్సిపాల్ మల్లనగౌడ పుష్ప, గౌడప్ప, విజయ్, సుజాత, యంకన్న, రవి, బసవ ప్రసాద్, చంద్రశేఖర్‌లు పాల్గొన్నారు.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ : ಮಹಿಳೆಗೆ ಸಮಾಜ ಗೆಲ್ಲಲು ಶಿಕ್ಷಣ ಮತ್ತು ಉದ್ಯೋಗ ಬೆನ್ನೆಲುಬು- ಸಂತೋಷರಾಣಿ

**ಜನಬಲವಾರ್ತೆ**

**ರಾಯಚೂರು,ಮಾ.8–** ಮಹಿಳೆ ಆಧುನಿಕವಾಗಿ ಸಾಕಷ್ಟು ಮುಂದುವರಿದಿದ್ದಾಳೆ ಎನ್ನುವುದು ಎಷ್ಟು ಸತ್ಯವೋ ಸಮಾಜದಲ್ಲಿ ಆಕೆಯ ಮೇಲೆ ಆಗುತ್ತಿರುವ ಶೋಷಣೆ ಕಡಿಮೆಯಾಗಿಲ್ಲ ಅನ್ನುವುದೂ ಅಷ್ಟೇ ಸತ್ಯ. ನಮ್ಮ ಸಮಾಜದಲ್ಲಿ ಒಬ್ಬ ಮಹಿಳೆ ಸಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮುಂದೆ ಬರಬೇಕಾದರೆ ಅಥವಾ ಸಾಧನೆಗಳನ್ನು ಮಾಡಬೇಕಾದರೆ ಪುರುಷರಿಗಿಂತ ಹೆಚ್ಚು ಕಷ್ಟಪಡಬೇಕಾಗುತ್ತದೆ ಮತ್ತು ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ಪುರಸಭೆ ತಹಶಿಲ್ದಾರ ಅಧಿಕಾರಿ ಸಂತೋಷರಾಣಿ ಬೇಸರ ವ್ಯಕ್ತಪಡಿಸಿದರು.

ಅವರಿಂದು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲ್ಪನಾ ಚಾವ್ಲಾ ಮಹಿಳಾ ಘಟಕ ಹಾಗೂ ಆತಂರಿಕ ಗುಣಮಟ್ಟ ಕೋಶದ ವತಿಯಿಂದ ಆಯೋಜಿಸಲಾಗಿದ್ದ 'ರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕುಟುಂಬದಲ್ಲೇ ಆಗಲಿ ಸಮಾಜದಲ್ಲೇ ಆಗಲಿ ಮಹಿಳೆಯರ ಬಗ್ಗೆ ಅಸಮಾನ ಮನೋಭಾವ ಈಗಲೂ ಇದೆ. ಅದೇ ಕಾರಣಕ್ಕೆ ನಮ್ಮ ಸಮಾಜದಲ್ಲಿ ಬಹಳ ಕಡಿಮೆ ಸಂಖ್ಯೆಯ ಮಹಿಳೆಯರಿಗೆ ಔದ್ಯೋಗಿಕವಾಗಿ ಸಾಧನೆ ಮಾಡಲು ಸಾಧ್ಯವಾಗಿದೆ.

ಶಿಕ್ಷಣ ಪಡೆದಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ, ಅದರ ಸದುಪಯೋಗ ಮಾಡಿಕೊಂಡು ಔದ್ಯೋಗಿಕವಾಗಿ ಮುಂದೆ ಬಂದವರು ಅಥವಾ ಶಿಕ್ಷಣಕ್ಕೆ ತಕ್ಕುದಾದ ಘನತೆಯ ಸ್ಥಾನಮಾನ ಪಡೆದವರು ತುಂಬಾ ಕಡಿಮೆ. ಕುಟುಂಬದಿಂದ ಪ್ರೋತ್ಸಾಹ ಇಲ್ಲದಿರುವುದು ಅಥವಾ ಸ್ವಯಂ ಅರಿವು–ಜಾಗೃತಿಯ ಕೊರತೆ ಈ ರೀತಿ ಅವಕಾಶ ವಂಚಿತವಾಗಲು ಕಾರಣ. ಮಹಿಳೆ ತಾನು ಪುರುಷರಿಗೆ ಸಮಾನಾಗಿ ನಿಲ್ಲಬೇಕು, ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು ಎಂದು ನಿರಂತರವಾಗಿ ಹೋರಾಟ ಮಾಡಿ, ಸವಾಲುಗಳನ್ನು ಎದುರಿಸಿ ನಿಂತಾಗಲೇ ಘನತೆಯ ಜೀವನ ಪಡೆಯಲು ಸಾಧ್ಯ ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಆರ್.ಮಲ್ಲನಗೌಡ ಮಾತನಾಡಿ, 1909ರಲ್ಲಿ ಅಮೆರಿಕದ ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರು ಅಸಮಾನತೆ ಹಾಗೂ ಶೋಷಣೆ ವಿರುದ್ಧ ಧ್ವನಿ ಎತ್ತಿದರು.

ಅದು ನಂತರ ದೊಡ್ಡ ಚಳುವಳಿ ರೂಪ ಪಡೆದು ಡೆನ್ಮಾರ್ಕ್, ಆಸ್ಟ್ರಿಯಾ, ಸ್ವಿಟ್ಜರ್ಲೆಂಡ್ ಸೇರಿದಂತೆ ಅನೇಕ ದೇಶಗಳಲ್ಲಿ ದೊಡ್ಡ–ದೊಡ್ಡ ಹೋರಾಟ ಮತ್ತು ಸಭೆಗಳು ನಡೆಯಲು ಕಾರಣವಾಯಿತು. ಈ ಐತಿಹಾಸಿಕ ಸಂದರ್ಭದ ಸ್ಮರಣಾರ್ಥವಾಗಿ 1975ರ ಮಾರ್ಚ್ 8ರಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐಡಿಬಿಐ ಬ್ಯಾಂಕ್ ಸಹಯೋಗದಲ್ಲಿ, ಕರೋನಾ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿದ ಬಡ ಆಶಾ ಕಾರ್ಯಕರ್ತೆಯರಿಗೆ ಧನಸಹಾಯ ಜೊತೆಗೆ ಸೀರೆ ವಿತರಿಸಲಾಯಿತು. ಕಲ್ಪನಾ ಚಾವ್ಲಾ ಮಹಿಳಾ ಘಟಕದ ಸಂಚಾಲಕಿ ಪುಷ್ಪ, ಆಂತರಿಕ ಗುಣಮಟ್ಟ ಕೋಶದ ಸಂಚಾಲಕ ಡಾ. ಮಹಂತೇಶ್ ಅಂಗಡಿ, ಪ್ರಾಧ್ಯಾಪಕರಾದ ಡಾ. ದಸ್ತಗಿರಿಸಾಬ್ ದಿನ್ನಿ, ಇಶ್ರತ್ ಬೇಗಂ, ಸಪ್ನಾ, ಡಾ.ಯಂಕಣ್ಣ, ಗೌಡಪ್ಪ ಪಾಟೀಲ್, ಮಹದೇವಪ್ಪ, ವಿಜಯಶ್ರೀ ಪಾಟೀಲ್, ಸುಜಾತ ಮಾಕಲ್, ಚಂದ್ರಶೇಖರ್, ಬಸವಪ್ರಸಾದ್, ರವಿ, ಸೈಯದ್ ಮಿನಾಜ್, ವಿಜಯ್ ಸರೋದೆ ಸೇರಿದಂತೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.